

# ಟಿಕಲ್ಸ್ ಬ್ಲೂ ಫ್ಲೈ ಕ್ಯಾಚರ್

## ಉಲಿವ ರಾಗಕ್ಕೆ ಮನಸೋತು...

**ಯಾವ ದಿಕ್ಕಿಂದಲೋ ಹಾರಿ ಬಂದ ಗಂಡು ಪಕ್ಷಿ ಇನ್ನ್ಯಾವುದೋ ದಿಕ್ಕಿಂದಲೊ ಹಾರಿ ಬಂದ ಹೆಣ್ಣು ಪಕ್ಷಿ ನಮ್ಮನೆಯ ವಠಾರದ ನುಗ್ಗೆ ಮರದಲ್ಲಿ ಜೊತೆಯಾಗಿ, ಬಾಗಿಲ ಪಕ್ಕದಲ್ಲಿ ನೇತು ಹಾಕಿರುವ ಆಲಂಕಾರಿಕ ಮಣ್ಣಿನ ದೀಪದ ಗೂಡಿನಲ್ಲಿ ಕಸ ಕಡ್ಡಿಯನ್ನು ಇಟ್ಟು ಗೂಡು ಮಾಡಿ ಮೂರು ಮೊಟ್ಟೆ ಇಟ್ಟು ಮರಿಮಾಡಿದ್ದೇ ಒಂದು ರೋಚಕ ಕಥಾನಕ.**

■ **ಲೋಕೇಶ್ ಮೊಸಳೆ**



ಅದೆಲ್ಲಿಂದಲೋ ಬಂದಿದ್ದವು. ನಮ್ಮನೆಯ ಎದುರಿನ ನುಗ್ಗೆಮರದ ಕೊಂಬೆಯಲ್ಲಿ ಹಾಡುತ್ತಿತ್ತು. ಹಾಡುತ್ತಾ ಹಾರುತ್ತಾ ಹುಳ ಹುಪ್ಪಟೆಗಳನ್ನು ಹಿಡಿದು ತಿನ್ನುತ್ತಾ ಕಾಲ ಕಳೆಯುತ್ತಿದ್ದವು. ಆ ಅಪರೂಪದ ಪಕ್ಷಿಯನ್ನು ನೋಡಲೆಂದೇ, ನಂದಿ ಬೆಟ್ಟಕ್ಕೆ ಹೋಗಿದ್ದೆ. ಅಲ್ಲಿಯ ಹಿಮಗಾಳಿಯ ನಸುಕಿನಲ್ಲಿ ನುಲಿವ ರಾಗಕ್ಕೆ ಮನಸೋತು ನಿಬ್ಬೆರಗಾಗಿ ಒಂದಷ್ಟು ಚಿತ್ರಗಳನ್ನು ತೆಗೆದಿದ್ದ ನಾನು ಈ 'ಟಿಕಲ್ಸ್ ಬ್ಲೂ ಫ್ಲೈ ಕ್ಯಾರ್ಚ್' ಗಾಢ ನೀಲಿ, ಹಳದಿ, ಕಪ್ಪು ಬಣ್ಣಗಳ ಸಮ್ಮಿಶ್ರಣಕ್ಕೆ ಪುಳಕಗೊಂಡಿದ್ದೆ. ಅಂಥ ಹಕ್ಕಿಯೇ ಸದಾ ನಮ್ಮನೆಯ ಗೇಟಿನ ಮೇಲೆ ಕುಳಿತು ಹಾಡುತ್ತಿದ್ದರೆ ನೋಡ ನೋಡುತ್ತಿದ್ದಂತೆ ಸಂಗಾತಿಗಳಿಬ್ಬರು ಕಾಣಿಸಿಕೊಂಡರು. ಈ ಜೋಡಿಗಳಿಬ್ಬರು ನಮ್ಮನೆಯ ಅಪರೂಪದ ನೆಂಟರಾಗಿದ್ದರು.

ಯಾವ ದಿಕ್ಕಿಂದಲೋ ಹಾರಿ ಬಂದ ಗಂಡು ಪಕ್ಷಿ ಇನ್ನ್ಯಾವುದೋ ದಿಕ್ಕಿಂದಲೊ ಹಾರಿ ಬಂದ ಹೆಣ್ಣು ಪಕ್ಷಿ ನಮ್ಮನೆಯ ವಠಾರದ ನುಗ್ಗೆ ಮರದಲ್ಲಿ ಜೊತೆಯಾಗಿ, ಬಾಗಿಲ ಪಕ್ಕದಲ್ಲಿ ನೇತು ಹಾಕಿರುವ ಆಲಂಕಾರಿಕ ಮಣ್ಣಿನ ದೀಪದ ಗೂಡಿನಲ್ಲಿ ಕಸ ಕಡ್ಡಿಯನ್ನು ಇಟ್ಟು ಗೂಡು ಮಾಡಿ ಮೂರು ಮೊಟ್ಟೆಗಳನ್ನು ಇಟ್ಟುಕೊಂಡಿರುವ ಗುಟ್ಟು ನನಗೆ ತಡವಾಗಿ ಗೊತ್ತಾಗಿತ್ತು. ಏನೇ ಇರಲಿ ವನ್ಯಜೀವಿಗಳ ಸಂತಾನ ಉಳಿಸಿಕೊಳ್ಳುವ ಹೋರಾಟ ಹಾಗೂ ಸಂಸಾರ ನಡೆಸುವ ಕ್ರಿಯೆ ಮನುಷ್ಯಲೋಕದ ಅಚ್ಚರಿಗಳಲ್ಲಿ ಒಂದು. ಹೇಗೋ ಹಾಗೆ ಹೀಗೆ ಮನೆಯೊಳಗಿದ್ದು ನಾನೇನೋ ನನ್ನದೇ ಲೋಕದಲ್ಲಿ ಮುಳುಗಿದ್ದಾಗಲೂ ಅವುಗಳಷ್ಟಕ್ಕೆ ಅವು ಹಾಡುತ್ತಾ ನುಲಿಯುತ್ತಾ ತಮ್ಮ ಸಹಜ ಜೀವನಕ್ಕೆ ಅಡ್ಡಿಯಾದಾಗಲೆಲ್ಲ ತಮ್ಮದೇ ಧ್ವನಿ ಭಾಷೆಯಲ್ಲಿ ಪರಸ್ಪರ ಸಂವಹನಗೊಳಿಸಿಕೊಂಡು ಈ ಜಗತ್ತಿನೊಳಗೆ ತನ್ನದೇ ಸಂತಾನದ ಉಳಿವಿಗಾಗಿ ಹೋರಾಟ ನಡೆಸುತ್ತಿದ್ದ ಸಂಗತಿಗಳೆಲ್ಲ ನನಗೆ ಅವುಗಳ ಚಲನವಲನ ಧ್ವನಿಗಳಿಂದಲೇ ಅರ್ಥವಾಗುತ್ತಿದ್ದವು.

ಒಮ್ಮೆ ಒಂದು ಬೆಳಗ್ಗೆ ಗೇಟಿನ ಸಮೀಪವಿದ್ದ ಮರದ ಟೊಂಗೆಯ ಮೇಲೆ ಕುಳಿತು ವಿಚಿತ್ರ ಕರ್ಕಶ ಧ್ವನಿಯಲ್ಲಿ ಅಸಹಜತೆಯಿಂದ ವರ್ತಿಸುತ್ತಿದ್ದ 'ಟಿಕಲ್ಸ್ ಬ್ಲೂ ಫ್ಲೈ ಕ್ಯಾಚರ್ ಪಕ್ಷಿಯನ್ನು ಗಮನಿಸಿದೆ. ಆ ಕೊಂಬೆಯಿಂದ ಇಲ್ಲಿಗೆ... ಇಲ್ಲಿಂದ ಬೇರೊಂದು ಕೊಂಬೆಗೆ ಹಾರುತ್ತಾ ಧ್ವನಿಯಲ್ಲಿ ಗಾಬರಿಗೊಂಡು ಹಾರಾಡುತ್ತಿತ್ತು. ಸೂಕ್ಷ್ಮವಾಗಿ ಗಮನಿಸಿದಾಗ ನಮ್ಮನೆಯ ಬೆಕ್ಕು ಹಕ್ಕಿಯನ್ನು ಹಿಡಿಯಲು ಹೊಂಚುಹಾಕಿದ್ದನ್ನು ಗಮನಿಸಿದೆ. ಬೆಕ್ಕನ್ನು ಬೆದರಿಸಿ ಓಡಿಸಿದೆ. ಒಂದಷ್ಟು